





ಸೂಕ್ಷ್ಮ ಸಂವೇದನೆಯ ಆ ವನ್ಯಜೀವಿಯು ಅಳಿವಿನಂಚಿನಲ್ಲಿ ಇರುವುದನ್ನು ಮನಗಂಡ ಭೂತಾನ್ ಸರಕಾರ ಥಿಂಪೂವಿನಲ್ಲಿರುವ ಮೋತಿತಾಂಗ್ ರಾಷ್ಟ್ರೀಯ ಉದ್ಯಾನವನವನ್ನು ಟಾಕಿನ್ ರಕ್ಷಿತಾ ವಲಯವೆಂದು ಘೋಷಿಸಿದೆ. ಇಲ್ಲಿ ಅವುಗಳನ್ನು ಸಂಗೋಪನೆ ಮಾಡುವುದರ ಜೊತೆಗೆ ಅವುಗಳ ಸಂತತಿಯನ್ನು ಸಂರಕ್ಷಿಸಲು ಕಾರ್ಯಪ್ರವೃತ್ತವಾಗಿದೆ. ಆದರೆ ದುರದೃಷ್ಟದ ಸಂಗತಿಯೆಂದರೆ, ಆ ಉದ್ಯಾನವನದಲ್ಲೇ 2017ರ ಜನವರಿ ತಿಂಗಳಲ್ಲಿ ಇಪ್ಪತ್ತೈದು ಟಾಕಿನ್‌ಗಳು ಒಂದು ವಾರದ ಅವಧಿಯಲ್ಲಿ ನಿಗೂಢವಾಗಿ ಸತ್ತುಹೋದವು. ಆ ಮುಗ್ಧ ಪ್ರಾಣಿಗಳು ವಿಷಯುಕ್ತ ಆಹಾರವನ್ನು ಸೇವಿಸಿ ಸತ್ತಿರಬಹುದು ಎಂಬ ಸಂದೇಹವಿದೆ. ಆದರೆ ಸಾವಿಗೆ ನಿರ್ಧಿಷ್ಟವಾದ ಕಾರಣ ಗೊತ್ತಾಗದೆ, ಭೂತಾನ್ ಸರಕಾರ ಆ ಸತ್ತ ಟಾಕಿನುಗಳ ರಕ್ತದ ಮಾದರಿಯನ್ನು ಬ್ಯಾಂಕಾಕ್‌ನ ಪ್ರಾಣಿ ಸಂಶೋಧನಾ ಕೇಂದ್ರಕ್ಕೆ ಕಳುಹಿಸಿ ವರದಿಗಾಗಿ ಕಾಯುತ್ತಿದೆಯಂತೆ.

ಈಗ ಅಲ್ಲಿ ಕೇವಲ ಹತ್ತು ಟಾಕಿನುಗಳು ಮಾತ್ರ ಬದುಕುಳಿದಿವೆ. ಆ ಘಟನೆಯಿಂದ ಎಚ್ಚೆತ್ತ ಭೂತಾನ್ ಸರ್ಕಾರ ಮೋತಿತಾಂಗ್ ಉದ್ಯಾನವನಕ್ಕೆ ಪ್ರವಾಸಿಗರು ಭೇಟಿ ನೀಡುವುದನ್ನು ತೀರಾ ಇತ್ತೀಚೆಗಿನವರೆಗೆ ತಡೆ ಹಿಡಿದಿತ್ತು. ಈಗ ಅಲ್ಲಿಗೆ ಪ್ರವಾಸಿಗರಿಗೆ ಪ್ರವೇಶವಿದೆಯಾದರೂ ಜನರು ಆ ಪ್ರಾಣಿಗಳ ಹತ್ತಿರ ಸುಳಿಯದಂತೆ ನಿರ್ಬಂಧಿಸಿದ್ದಾರೆ.

ಭೂತಾನಿನ ರಾಜಧಾನಿ ಥಿಂಪುವಿನ ಪ್ರವಾಸದಲ್ಲಿ ಟಾಕಿನ್‌ಗಳದ್ದೇ ವಿಶೇಷ ಆಕರ್ಷಣೆ. ದೇಶದ ಪಶ್ಚಿಮ ಒಳನಾಡಿನಲ್ಲಿರುವ ಈ ಕಣಿವೆ ಪ್ರದೇಶ ಹಲವಾರು ಬೌದ್ಧ ಪ್ರವಾಸಿ ಕೇಂದ್ರಗಳನ್ನು ಹೊಂದಿದೆ. ನಗರದ ಎತ್ತರದ ಸ್ಥಳದಲ್ಲಿರುವ ಬುದ್ಧ ಡೋರ್‌ಡೆನ್ಮ ಕಂಚಿನ ಪ್ರತಿಮೆ ಪ್ರವಾಸಿಗರ ಮತ್ತೊಂದು ವಿಶೇಷ ಆಕರ್ಷಣೆ. ಜಗತ್ತಿನಲ್ಲೇ ಅತ್ಯಂತ ದೊಡ್ಡ ಬುದ್ಧ ಪ್ರತಿಮೆ ಇದು ಎನ್ನಲಾಗುತ್ತಿದ್ದು, ಪ್ರತಿಮೆಯ ಸುತ್ತಲಿಂದ ಕೆಳಗೆ ನೋಡಿದರೆ ಥಿಂಪೂ ಕಣಿವೆಯ ರಮಣೀಯ ದೃಶ್ಯಗಳು ಮನಸ್ಸನ್ನು ಮುದಗೊಳಿಸುತ್ತವೆ.